Sri S. R. KANTHI.—Normally what we do is that we look to the fact as to how many feeder schools are there in the locality. Even if there are no feeder schools, Government is not barred from sanctioning a high school provided they are going to start an anathashram type of school.

Mr. SPEAKER.—In view of the fact that information is being collected, I hold over this question and as soon as the information is obtained, it will be taken up again.

Discontinuing the system of nomination of Members by the Government to the Co-operative Societies in the State.

*Q.—732 Sri J. NARAYANAPPA (Mulbagal).—

Will the Government be pleased to state:—

the reasons for discontinuing the system of nomination of members by the Government to the Co-operative Societies in the State?

A.—Sri RAMAKRISHNA HEGDE (Minister for Development, Panchayat Raj and Co-operation).—

Since Government have accepted the policy of de-officialisation of the management of Co-operative Societies as recommended by Government of India.

ಶ್ರೀ ಜೆ. ನಾರಾಯಣಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಭಾರತ ಸರ್ಕಾರದವರು ಶಿಫಾರಸ್ಸು ಮಾಡಿರುವ ರೀತ್ಯಾ ಸಹಕಾರ ಸಂಘಗಳ ಆಡಳಿತದ ಸಂಭಂಧದಲ್ಲಿ ಸರ್ಕಾರೀ ಅಧಿಕಾರಿಗಳಿಂದ ಅತೀತವಾಗಿರುವ ಕಾರ್ಯ ನೀತಿಯನ್ನು ರಾಜ್ಯ ಸರ್ಕಾರದವರು ಅಂಗೀಕರಿಸಿರುವುದರ ಪ್ರಯುಕ್ತ ರಾಜ್ಯದಲ್ಲರುವ ಸಹಕಾರ ಸಂಘಗಳಿಗೆ ಸರ್ಕಾರದವರು ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ಪದ್ಧತಿಯನ್ನು ನಿಲ್ಲಿಸಿದೆ ಎಂದು ಹೇಳಿದ್ದೀರಿ, ಆ ರೀತಿ ಯಾವ ಯಾವ ಸೊಸೈಟಿಗಳಿಗೆ ನಾಮಕರಣ ಮಾಡುವುದನ್ನು ನಿಲ್ಲಿಸಿದ್ದೀರಿ ಆ ರೀತಿ ನಿಲ್ಲಿಸುವುದಕ್ಕೆ ಕಾರಣಗಳೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೇಂದ್ರ ಸರ್ಕಾರದವರ ನೀತಿ ಸಹಕಾರ ಸಂಸ್ಥೆಗಳಲ್ಲಿ ಸರ್ಕಾರದಿಂದ ನಾಮಿನೇಷನ್ ಮಾಡಲ್ಪಟ್ಟ ಸದಸ್ಯರು ಇರಕೂಡದು ಎಂದು ಇದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೆ ನಮ್ಮ ಸರ್ಕಾರದವರು ಜಿಲ್ಲಾ ಮಟ್ಟದ ಕೆಳಗಡೆ ಇರತಕ್ಕ ಸಹಕಾರ ಸಂಸ್ಥೆಗಳಲ್ಲಿ ಸರ್ಕಾರದ ಯಾವ ಪ್ರತಿನಿಧಿಗಳೂ ಇರಕೂಡದು ಎಂದು ತೀರ್ಮಾನ ಮಾಡಿದ್ದೇವೆ. ಎಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ಸರ್ಕಾರದವರು ಹಾಕುತ್ತಾರೆಯೋ ಅಲ್ಲಿ ಆಯಾ ಮಟ್ಟದ ಸಹಕಾರ ಸಂಘದ ಇಲಾಖೆಯ ಅಧಿಕಾರಿಗಳು ಸರ್ಕಾರದಿಂದ ನಾಮಿನೇಟ್ ಹೊಂದಿರುತ್ತಾರೆ. ಮತ್ತು ಸ್ಟೇಟ್ ಲೆವೆಲ್ ಭಾಗನ್ಥ ಸಂಸ್ಥೆಗಳಲ್ಲಿ 3 ಜನರನ್ನು ಸರ್ಕಾರದವರು ನಾಮಿನೇಟ್ ಮಾಡುತ್ತಾರೆ.

ಶ್ರೀ ಜೆ. ನಾರಾಯಣಪ್ಪ.—ಈಗ ತಾಲ್ಲೂಕು ಮಟ್ಟದಲ್ಲಿರತಕ್ಕ ಎಲ್ಲಾ ಸೊಸೈಟಿಗಳಿಗೂ ಸರ್ಕಾರದವರು ಸದಸ್ಯರುಗಳನ್ನು ನಾಮಿನೇಟ್ ಮಾಡುವ ಪದ್ಧತಿ ಇತ್ತು. ಈಗ ಅದನ್ನು ನಿಲ್ಲಿಸಬೇಕಾದರೆ ಅದರಿಂದ ಏನಾದರೂ ತೊಂದರೆಯಾಗಿದೆಯೇ, ಅಪಾಯ ಆಗಿದೆಯೇ ಅಥವಾ ಸುಮ್ಮನೆ ನಿಲ್ಲಿಸಿದ್ದೀರಾ, ಹೇಗೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಅಪಾಯ ಮತ್ತು ತೊಂದರೆಯ ಪ್ರಶ್ನೆಯಲ್ಲ. ಈ ಸಂಸ್ಥೆಗಳು ಪ್ರಜಾಸತ್ತಾತ್ಮಕವಾದ ಸಂಸ್ಥೆಗಳು. ಈ ಸಂಸ್ಥೆಗಳಲ್ಲಿ ಹೊರಗಿನವರು ಯಾರೂ ಇರಕೂಡದು ಎಂದು ಅನೇಕ ಕಾನ್ಫರೆನ್ಸ್‌ಗಳಲ್ಲಿ ಅಭಿಪ್ರಾಯ ಬಂತು. ಆದ್ದರಿಂದ ನಾಮಿನೇಷನ್ ಪದ್ಧತಿಯನ್ನು ನಿಲ್ಲಿಸಿದ್ದೇವೆ.

ಶ್ರೀ ಜೆ. ನಾರಾಯಣಪ್ಪ.—ನೂರು ರೂಪಾಯಿಗಳ ಬಂಡವಾಳವನ್ನು ಹಾಕಿರತಕ್ಕ ಸೊಸೈಟಿಯೂ ಒಂದು ಸೊಸೈಟಿ, ಒಂದು ಲಕ್ಷ ರೂಪಾಯಿ ಬಂಡವಾಳವನ್ನು ಹಾಕಿರತ ಕ್ಕ ಸೊಸೈಟಿಯೂ ಒಂದು ಸೊಸೈಟಿಯಾಗಿರುತ್ತದೆ. ಹೀಗಿರಬೇಕಾದರೆ ಒಂದು ಸೊಸೈಟಿಗೆ ನಾಮಕರಣ ಮಾಡುವ ಪದ್ಧತಿಯನ್ನು ನಿಲ್ಲಿಸುವುದಾದರೆ ಎಲ್ಲಾ ಸೊಸೈಟಿಗಳಿಗೂ ನಾಮಕರಣ ಮಾಡುವ ಪದ್ಧತಿಯನ್ನು ನಿಲ್ಲಿಸುವುದು ಒಳ್ಳೆಯದಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರಿಗೆ ನಾನು ಹೇಳಿದುದು ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಸರ್ಕಾರದ ವತಿಯಿಂದ ನಾಮಕರಣದ ಅವಶ್ಯಕತೆ ಯಾವಾಗ ಬರುತ್ತದೆ ಎಂದರೆ ಸರ್ಕಾರದ ಹಣ ಆ ಸೊಸೈಟಿಯಲ್ಲಿ ಇರಬೇಕು, ಸರ್ಕಾರದವರು ಅದರಲ್ಲಿ ಪಾಲುಗಾರರಾಗಿರ ಬೇಕು. ಆ ರೀತಿ ಇಲ್ಲದೆ ಕೆಲವು ಜನಗಳು ಸೇರಿಕೊಂಡು ತಮ್ಮ ಬಂಡವಾಳವನ್ನು ಹಾಕಿ ಅವರು ಒಂದು ಸೊಸೈಟಿ ಮಾಡಿಕೊಂಡು ಅವರು ಅದನ್ನು ನಡೆಸುತ್ತಿದ್ದರೆ ಅಂಥಾ ಸೊಸೈಟಿಗಳಲ್ಲಿ ಸರ್ಕಾರ ದವರು ಕೈ ಹಾಕುವ ಅವಶ್ಯಕತೆ ಇಲ್ಲ.

ಶ್ರೀ ಜಿ. ರಾಮೇಗೌಡ.—ಮೈಸೂರು ದೇಶದಲ್ಲಿರತಕ್ಕ ಎಲ್ಲಾ ಸೊಸೈಟಿಗಳಿಗೂ ಈ ತತ್ವ ವನ್ನು ಅನುಸರಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಈಗಾಗಲೇ ಹೇಳಿದ್ದೇನೆ ಎರಡು ಸಂದರ್ಭಗಳಲ್ಲಿ ನಾವು ನಾಮಕರಣ ಮಾಡುತ್ತೇವೆ ಎಂದು. ಅದರಲ್ಲಿ ಮೊದಲನೆಯದಾಗಿ ಯಾವ ಸಹಕಾರ ಸಂಘದ ಬೈಲಾ ದಲ್ಲಿ ಬೋರ್ಡ್ ಆಫ್ ಡೈರೆಕ್ಟರನ್ನು ಸರ್ಕಾರ ನಾಮಕರಣ ಮಾಡಬೇಕೆಂದು ಇದೆಯೋ ಅಲ್ಲಿ ಸರ್ಕಾರ ನಾಮಕರಣ ಮಾಡುತ್ತದೆ. ಇನ್ನು ಎರಡನೆಯದಾಗಿ ಯಾವ ಸಹಕಾರ ಸಂಸ್ಥೆಯಲ್ಲಿ ಸರ್ಕಾರ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ಹಾಕಿರುತ್ತದೆಯೋ ಅಲ್ಲಿ ಸರ್ಕಾರ ತನ್ನ ಪ್ರತಿನಿಧಿಯನ್ನು ನಾಮಕರಣ ಮಾಡುತ್ತದೆ. ಈ ಎರಡು ಪ್ರಸಂಗಗಳಲ್ಲಿ ಮಾತ್ರ ಸರ್ಕಾರ ತನ್ನ ಪ್ರತಿನಿಧಿಯನ್ನು ನಾಮಕರಣ ಮಾಡುತ್ತದೆ.

ಶ್ರೀ ಬಿ. ಎಲ್. ಗೌಡ.—ಜಿಲ್ಲಾ ಮಟ್ಟದ ಸಹಕಾರ ಸಂಘಗಳಲ್ಲಿ ಸರ್ಕಾರದ ಪ್ರತಿನಿಧಿಗಳನ್ನು ನಾಮಕರಣ ಮಾಡಬೇಕಾದ ಸಂದರ್ಭಗಳಲ್ಲಿ ಅಧಿಕಾರಿಗಳನ್ನು ನಾಮಕರಣ ಮಾಡುತ್ತೀರೋ ಅಥವಾ ಖಾಸಗಿಯವರನ್ನು ನಾಮಕರಣ ಮಾಡುತ್ತೀರೋ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೇವಲ ಅಧಿಕಾರಿಗಳನ್ನೇ ನಾಮಕರಣ ಮಾಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಭಾರತ ಸರ್ಕಾರದವರು ಶಿಫಾರಸ್ಸು ಮಾಡಿರುವುದರಿಂದ ಸಹಕಾರ ಸಂಸ್ಥೆಗಳಿಗೆ ಸರ್ಕಾರ ಸದಸ್ಯರುಗಳನ್ನು ನಾಮಕರಣ ಮಾಡುವ ಪದ್ಧತಿಯನ್ನು ನಿಲ್ಲಿಸಿದ್ದೇವೆಂದು ಹೇಳಿದಿರಿ, ಹಾಗಾದರೆ ಮೊನ್ನೆ ಈ ಸಭೆಯಲ್ಲಿ ಸಹಕಾರ ಸಂಘದ ತಿದ್ದುಪಡಿಯನ್ನು ತಂದಾಗ ಅದರಲ್ಲಿ ಸಹಕಾರ ಸಂಘಗಳಿಗೆ ಸರ್ಕಾರ ನಾಮಕರಣ ಮಾಡುವುದಕ್ಕೆ ಅವಕಾಶವನ್ನು ಇಟ್ಟುಕೊಂಡಿದ್ದಾರೆ. ಇದರಿಂದ ಭಾರತ ಸರ್ಕಾರದವರ ಶಿಫಾರಸ್ಸಿಗೆ ಬೆಲೆಯನ್ನು ಕೊಟ್ಟ ಹಾಗೆ ಆಯಿತೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಿನ್ನೆ ನಾವು ಆ ತಿದ್ದುಪಡಿಯನ್ನೇನೂ ತರಲಿಲ್ಲ. ಅದು ಮೊದಲು ಇದ್ದಂತಹ ಕಾಯಿದೆಯಲ್ಲಯೇ ಇತ್ತು. ಎಲ್ಲಿ ರಾಜ್ಯ ಸರ್ಕಾರದ ಹಣ ದೊಡ್ಡ ಮಟ್ಟದಲ್ಲಿ ಇದೆಯೋ ಅಲ್ಲಿಗೆ ಸರ್ಕಾರದ ವತಿಯಿಂದ 3 ಜನರನ್ನು ನಾಮಕರಣ ಮಾಡುವುದಕ್ಕೆ ಭಾರತ ಸರ್ಕಾರದ ಆಕ್ಷೇಪ ಇಲ್ಲ.

ಶ್ರೀ ಜಿ. ರಾಮೇಗೌದ.—ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಸರ್ಕಾರದ ಷೇರು ಒಂದು ಲಕ್ಷ ರೂಪಾಯಿಗಳು ಇದೆ. ಆ ಸೊಸೈಟಿಗಳಿಗೆ ಸರ್ಕಾರ ತನ್ನ 3 ಜನ ಪ್ರತಿನಿಧಿಗಳನ್ನು ಹಾಕಿದ್ದಾರೆ, ಅದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಿಂದೆ ಆ ಸೊಸೈಟಿಗಳಿಗೆ ನಾಮಕರಣ ಮಾಡಿದಂತಹವರೇ ಇನ್ನೂ ಕಂಟಿನ್ಯೂ ಆಗಿದ್ದಾರೆ. ಆ ಸೊಸೈಟಿಗಳವರು ತಮ್ಮ ಬೈಲಾವನ್ನು ಇನ್ನೂ ತಿದ್ದುಪಡಿ ಮಾಡಿಲ್ಲ ಎಂದು ಅರ್ಥವಾಗುತ್ತದೆ. ಈಗ ಸೊಸೈಟಿಗಳ ಬೈಲಾವನ್ನು ತಿದ್ದುಪಡಿ ಮಾಡುವುದಕ್ಕೆ ಹೇಳಿದ್ದೇವೆ. ಈಗ ನಾಮಿನೇಟ್ ಮಾಡಿರತಕ್ಕ ಸರ್ಕಾರದ ಪ್ರತಿನಿಧಿಗಳು ಆ ಸೊಸೈಟಿಗಳಲ್ಲಿ ಇದ್ದರೆ ಅವರನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ಯಾವ ಸೊಸೈಟಿಯಲ್ಲಿ ಸರ್ಕಾರದವರು ಹಾಕುತ್ತಾರೆಯೋ ಅಂಥ ಕಡೆ ಸರ್ಕಾರ ಅಧಿಕಾರಿಗಳನ್ನು ಮಾತ್ರ ನಾಮಕರಣ ಮಾಡಬೇಕು ಎನ್ನುವಂತಹ ತತ್ವವನ್ನು ಪ್ರತಿಪಾದನೆ ಮಾಡುತ್ತಿದ್ದಾರೆಂದು ಹೇಳಿದರು. ಕೆಲವು ಕಡೆ ಅಧಿಕಾರಿಗಳ ಜೊತೆಗೆ ಒಬ್ಬ ಖಾಸಗೀ ವ್ಯಕ್ತಿಯನ್ನೂ ನಾಮಕರಣ ಮಾಡಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಅಂಥಾ ಕೇಸುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅವರನ್ನು ವಜಾಮಾಡುವುದಕ್ಕೆ ಸರ್ಕಾರ ಆಶ್ವಾಸನೆಯನ್ನು ಕೊಡುತ್ತಡೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಧಿಕಾರೇತರರನ್ನು ನಾಮಕರಣ ಮಾಡಕೂಡದು ಎಂದೇನೂ ಇಲ್ಲ. ಅವರೇನು ಪಾಪ ಮಾಡಿಲ್ಲ. ಸಾಮಾನ್ಯವಾಗಿ ಅಧಿಕಾರಿಗಳನ್ನೇ ನಾಮಕರಣ ಮಾಡುತ್ತೇವೆ. ಕೆಲವೊಂದು ಪ್ರಸಂಗಗಳಲ್ಲಿ ಅಧಿಕಾರೇತರರ ಮತ್ತು ತಜ್ಞರ ಅವಶ್ಯಕತೆ ಇದ್ದರೆ ಅವರನ್ನು ನಾಮಕರಣ ಮಾಡುತ್ತೇವೆ.

ಶ್ರೀ ಎಸ್. ಎಂ. ಕೃಷ್ಣ.—ಹಾಗಾದರೆ ಕೇಂದ್ರ ಸರ್ಕಾರದ ಆದೇಶವನ್ನು ಎಷ್ಟರ ಮಟ್ಟಿಗೆ ಪರಿಪಾಲನೆ ಮಾಡಿಕೊಂಡು ಬರುತ್ತಿದ್ದಾರೆ ಎನ್ನುವುದಕ್ಕೆ ಇದು ನಿದರ್ಶನವಲ್ಲವೇ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೇಂದ್ರ ಸರ್ಕಾರದಿಂದ ಯಾವ ಆದೇಶವೂ ಬಂದಿಲ್ಲ, ಅದು ಸೂಚನೆ ಮಾತ್ರ ಆಗಿದೆ. ಎರಡನೆಯದಾಗಿ ಕೇಂದ್ರ ಸರ್ಕಾರದವರು ಯಾವ ಯಾವ ಸೂಚನೆಗಳನ್ನು ಕೊಡುತ್ತಾರೆಯೋ ಅದೆಲ್ಲವನ್ನೂ ತೆಗೆದುಕೊಳ್ಳಬೇಕೆಂದಿಲ್ಲ. ಈಗ ನಾವು ಯಾವ ರೀತಿಯಿಂದಲೂ ಕೇಂದ್ರ ಸರ್ಕಾರದ ಸೂಚನೆಗೆ ವಿರೋಧ ಮಾಡಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ನಮಗೆ ಯಾವುದು ಅನುಕೂಲವಾಗುತ್ತದೆಯೋ ಅಂಥ ಸೂಚನೆಗಳನ್ನು ಮಾತ್ರ ಆಚರಣೆಗೆ ತಂದು ಅನಾನುಕೂಲವಾದವುಗಳನ್ನು ಹಾಗೆಯೇ ಬಿಟ್ಟು ಬಿಡಬೇಕು ಎನ್ನುವುದು ಸರ್ಕಾರದ ಮನೋಭಾವವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಹೇಗೆ ಉದ್ಭವವಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ, ಸ್ವಾಮಿ.

Hindu Orphanages or Destitute Homes in the State.

*Q.—706. Sri G. V. GOWDA (Palya).—

Will the Government be pleased to state :—

(*a*) the number and names of Hindu Orphanages or Destitute homes in the State and the number of orphans or destitutes in each of the said Institutions;

(*b*) the amount of grant paid to each of these institutions for the year 1961-62, 1962-63 and 1963-64 (institution-war) figures may be furnished;

(*c*) whether grants have been paid to Hostels on the ground that orphans or destitutes are the boarders therein and if so, the names of such Hostels and the amount paid to each of them during the last 3 years ?

A.—Sri S. R. KANTHI (Minister for Education).—

(*a*), (*b*) and (*c*) The information is being collected and will be placed on the Table of the House. This will take considerable time to collect, as this involves reference to the institutions in the districts of the State.

Mr. SPEAKER.—I will hold it over because it is said that information is being collected. I find that this question will take considerable time to collect information. In such in circumstances, it would be worth while to bring it to my notice so that, if I find that the work is so voluminous, I will treat it as unstarred.

Abolition of Village Officers and Thoti Thalwars in the State.

*Q.—735. Sri J. NARAYANAPPA (Mulbagal).—

Will the Government be pleased to state :—

(*a*) the stage at which the question of the abolition of Village Officers and Thoti Thalwaras in the State is pending ;